ತೆಗೆದುಕೊಳ್ಳುವಂತಹ ಯಾವುದೇ ಶಕ್ತಿಗಳಿದ್ದರೂ ಸಹ ಸರಿಯಾದಂತಹ ಪಾಠ ಕಲಿಸುವುದಕ್ಕೆ, ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಇಲಾಖೆಯ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇನೆ. ನಮ್ಮ ಅಧಿಕಾರಿಗಳು 24 ಗಂಟೆಗಳ ಕಾಲ alert ಆಗಿದ್ದಾರೆ. ನಿನ್ನೆ ಪೂರ್ತಿಯಾಗಿ ಆ ದಿಕ್ಕಿನಲ್ಲಿ ಪ್ರಯತ್ನ ನಡೆಸಿದ್ದಾರೆ. ಅದಕ್ಕಾಗಿ ಇಷ್ಟು ಶಾಂತ ರೀತಿಯಲ್ಲಿ ಇವೆಲ್ಲ ಸಮಸ್ಯೆಗಳು ಬಗೆಹರಿದಿವೆ. ನಾನು ದಯವಿಟ್ಟು ನಿಮ್ಮ ಸಹಕಾರವನ್ನು ಮತ್ತೊಮ್ಮೆ ಕೋರುತ್ತೇನೆ.

ಅಧ್ಯಕ್ಷರು: ಈಗ ಮಾನ್ಯ ಗೃಹ ಸಚಿವರು ಒಂದು ಹೇಳಿಕೆಯನ್ನು ನೀಡುತ್ತಾರೆ.

2. ಮಂತ್ರಿಗಳ ಹೇಳಿಕೆ:

ವಿಷಯ: ನಕ್ಸಲ್ ಚಟುವಟಿಕೆಯನ್ನು ನಿಯಂತ್ರಿಸುವ ಬಗ್ಗೆ.

ಶ್ರೀ ವಿ.ಎಸ್. ಆಚಾರ್ಯ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಇದು ನಿನ್ನೆ ಸಂಜೆ ನಡೆದಂತಹ ಬೇರೊಂದು ಘಟನೆ ಎಂದರೆ ನಕ್ಸಲ್‌ಗೆ ಸಂಬಂಧಪಟ್ಟ ಬಗ್ಗೆ ಹೇಳಿಕೆಯನ್ನು ನೀಡುತ್ತೇನೆ.

ಕಳೆದ ಸುಮಾರು ಒಂದೂವರೆ ವರ್ಷದ ಅವಧಿಯಲ್ಲಿ ಸರ್ಕಾರದ ವಿಶೇಷ ಪ್ರಯತ್ನದಿಂದ ಈ ನಕ್ಸಲ್ ಚಟುವಟಿಕೆಯನ್ನು ಸಾಕಷ್ಟು ನಿಯಂತ್ರಣಕ್ಕೆ ತರುವಲ್ಲಿ ನಮ್ಮ ಸರ್ಕಾರ ಸಫಲವಾಗಿದೆ. ಆ ಕಾರಣದಿಂದ ಇವತ್ತು ಭಾರತ ಸರ್ಕಾರದವರು ನಕ್ಸಲ್ ಪೀಡಿತ ರಾಜ್ಯಗಳ ಲಿಸ್ಟ್‌ನಿಂದ ಕರ್ನಾಟಕವನ್ನು ಹೊರಗೆ ಇಟ್ಟಂತಹ ವಿಷಯ ತಮಗೆ ಗೊತ್ತಿರಬಹುದು. ಆದರೂ ಇದರ ಬಗ್ಗೆ ನಮ್ಮ ಜಾಗ್ರತೆ ಮುಂದುವರೆಯುತ್ತಿದೆ. ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಕೆಲವು ಭಾಗದಲ್ಲಿ ಪೊಲೀಸ್ ನಕ್ಸಲ್ ನಿಗ್ರಹ ಪಡೆ ಕಾರ್ಯಾಚರಣೆ ಇನ್ನು ನಡೆಯುತ್ತಿದ್ದೂ, ಕೆಲವು ಶಸ್ತ್ರಧಾರಿ ನಕ್ಸಲರು ಉಡುಪಿ ಜಿಲ್ಲೆಯ ಅಜಕಾರ್ ಪೊಲೀಸ್ ಠಾಣೆಯ ವ್ಯಾಪ್ತಿಯ ಅರಣ್ಯ ಪ್ರದೇಶದಲ್ಲಿ ಸಂಚರಿಸುತ್ತಿರುವ ಬಗ್ಗೆ ಪೊಲೀಸರಿಗೆ ನಿನ್ನೆ ಅಂದರೆ ದಿನಾಂಕ: 01.03.2010ರಂದು ಸಿಕ್ಕ ಖಚಿತ ಮಾಹಿತಿ ಮೇರೆಗೆ ಶ್ರೀ ಪ್ರವೀಣ್ ಮಧುಕರ್ ಪವಾರ್, ಎಸ್‌ಪಿ, ಉಡುಪಿ

ಜಿಲ್ಲೆ, ಅವರ ನೇತೃತ್ವದಲ್ಲಿ ಡಿವೈಎಸ್‌ಪಿ ಕಾರ್ಕಳ, ಶ್ರೀ ಸಂತೋಷ್ ಕುಮಾರ್, ಅದೇ ರೀತಿ ಕಾರ್ಕಳದ ಪೊಲೀಸ್ ಇನ್‌ಸ್ಪೆಕ್ಟರ್ ಮತ್ತು ಸಬ್ ಇನ್ಸ್‌ಪೆಕ್ಟರ್ ಎಲ್ಲರ ನೇತೃತ್ವದಲ್ಲಿ 13 ಮಂದಿ ಪೊಲೀಸ್ ಸಿಬ್ಬಂದಿಗಳನ್ನು ಒಳಗೊಂಡಂತಹ ತಂಡ ನಕ್ಸಲರ ಹುಡುಕಾಟಕ್ಕೆ ಹೊರಟಿತ್ತು. ದಿನಾಂಕ 01.03.2010ರಂದು ಸಂಜೆ 4.30ರ ಸಮಯದಲ್ಲಿ ಪೊಲೀಸ್ ತಂಡ ಅಜಕಾರ್ ಪೊಲೀಸ್ ಠಾಣೆ ವ್ಯಾಪ್ತಿಯ ಅಂಡಾರು ಗ್ರಾಮದ ಹತ್ತಿರ ಮೈರೋಳಿ ಅರಣ್ಯ ಪ್ರದೇಶದಲ್ಲಿ ನಕ್ಸಲರನ್ನು ಹುಡುಕುತ್ತಿರುವಾಗ ಮೂರು ಜನರನ್ನೊಳಗೊಂಡ ನಕ್ಸಲರ ತಂಡವೊಂದು ಪೊಲೀಸರ ಮೇಲೆ ಗುಂಡಿನ ದಾಳಿಯನ್ನು ನಡೆಸಿತು. ಪೊಲೀಸರು ಸಹ ರಕ್ಷಣೆಗಾಗಿ ನಕ್ಸಲರ ಮೇಲೆ ಗುಂಡು ಹಾರಿಸಿದರು. ಈ ಗುಂಡಿನ ಚಕಮಕಿ ಸುಮಾರು 15 ನಿಮಿಷಗಳ ಕಾಲ ನಡೆಯಿತು. ಈ ದಾಳಿಯಲ್ಲಿ ಉಡುಪಿ ಡಿಆರ್ ಪೇದೆ ರಾಜೇಶ್ ಎಂಬುವರ ತೋಳಿಗೆ ಗುಂಡು ತಗುಲಿ ಗಾಯಗೊಂಡಿದ್ದು, ಗುಂಡಿನ ಚಕಮಕಿ ನಿಂತ ನಂತರ ಪೊಲೀಸರು ಸ್ಥಳವನ್ನು ಶೋಧಿಸಿದಾಗ ಓರ್ವ ನಕ್ಸಲನು ಸತ್ತಿದ್ದು, ಅವನ ಬಳಿ ಒಂದು ಎಸ್‌ಎಲ್‌ಆರ್ ಬಂದೂಕು ಮತ್ತು ಎರಡು ಗುಂಡು ತುಂಬಿಸಿದ್ದ ಮ್ಯಾಗ್ಸಿನ್‌ಗಳು ಕಂಡುಬಂದವು. ಸತ್ತ ನಕ್ಸಲನು ಬೆಳ್ತಂಗಡಿ ತಾಲ್ಲೂಕಿನ ವಸಂತ ಅಲಿಯಾಸ್ ಆನಂದ ಎಂದು ಗುರುತಿಸಲಾಗಿದೆ ಹಾಗೂ ಈತನ ಪತ್ತೆಗಾಗಿ ಮೂರು ಲಕ್ಷ ರೂಪಾಯಿ ಬಹುಮಾನ ಸಹ ಹಿಂದೆ ಘೋಷಿಸಲಾಗಿತ್ತು. ಇನ್ನಿಬ್ಬರು ನಕ್ಸಲರು ಪರಾರಿಯಾಗಿದ್ದು, ಅವರಲ್ಲಿ ಒಬ್ಬರು ಮಹಿಳೆ ಎಂದು ತಿಳಿದು ಬಂದಿದ್ದು, ಅವರು ಕನ್ಯಾಕುಮಾರಿ ಎಂಬ ಮಹಿಳೆಯಾಗಿದ್ದರೆ ಅವರ ಮೇಲೂ ಸಹ ಹಿಂದೆ ಮೂರು ಲಕ್ಷ ರೂಪಾಯಿ ಬಹುಮಾನವನ್ನು ಘೋಷಣೆ ಮಾಡಲಾಗಿತ್ತು. ಗಾಯಗೊಂಡ ಪೊಲೀಸ್ ಪೇದೆಯನ್ನು ಮಣಿಪಾಲದಲ್ಲಿರುವ ಕಸ್ತೂರ್ ಬಾ ಆಸ್ಪತ್ರೆಗೆ ಸೇರಿಸಲಾಗಿದ್ದು, ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಪೊಲೀಸ್ ನಕ್ಸಲ್ ನಿಗ್ರಹ ಪಡೆಯ ಕಾರ್ಯಾಚರಣೆ ಮುಂದುವರೆದಿದೆ ಮತ್ತು ಆ ಸ್ಥಳದಿಂದಲೇ ಪೊಲೀಸ್, ಜಿಲ್ಲಾಧಿಕಾರಿಗಳು ನನಗೆ ವರ್ತಮಾನವನ್ನು ಕೊಟ್ಟಿದ್ದಾರೆ. ಇನ್ನೂ ಆ

ಕಾರ್ಯ ಮುಂದುವರೆಯುತ್ತದೆ ಎಂದು ಹೇಳುವುದನ್ನು ಒಳಗೊಂಡಂತೆ ಇವಿಷ್ಟು ವಿಷಯವಾಗಿದೆ.

ಅಧ್ಯಕ್ಷರು : ಈಗ ಸಭೆಯ ಮುಂದಿಡಲಾದ ಕಾಗದ ಪತ್ರಗಳು.

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು :

1) ಶ್ರೀ ಬಿ.ಎಸ್. ಯಡಿಯೂರಪ್ಪ, ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಅಧ್ಯಕ್ಷರೇ,

1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮ ಕಲಂ 8(3)ರ ಮೇರೆಗೆ:

1. 1963ರ ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಾವಳಿಗಳ ನಿಯಮ 3,4,8,14 ಹಾಗೂ 23ರ ತಿದ್ದುಪಡಿ ಹಾಗೂ ಅನುಸೂಚಿ II ಮತ್ತು IIIನ್ನು ಬಿಡುವ ಬಗ್ಗೆ ದಿನಾಂಕ 24.10.2009ರಂದು ಹೊರಡಿಸಲಾದ ಡಿಪಿಎಆರ್/2/ಎಸ್ಎಂಆರ್/2008ನೇ ಸಂಖ್ಯೆಯ ಅಧಿಸೂಚನೆ.

2. 1977ರ ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿಗಳ ನಿಯಮ 15ಕ್ಕೆ ತಿದ್ದುಪಡಿ ಮಾಡಿ ದಿನಾಂಕ 20.01.2010ರಂದು ಹೊರಡಿಸಲಾದ ಡಿಪಿಎಆರ್/48/ಎಸ್ಆರ್ಆರ್/ 2009ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

1984ರ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 23(3)ರ ಮೇರೆಗೆ:

1985ರ ಕರ್ನಾಟಕ ಲೋಕಾಯುಕ್ತ ನಿಯಮಾವಳಿಗಳ ನಮೂನೆ IV ನ್ನು ಬದಲಾಯಿಸಿರುವ ಬಗ್ಗೆ ದಿನಾಂಕ 25.01.2010ರಂದು ಹೊರಡಿಸಲಾದ ಸಿಆಸುಇ/18/ಸೇಲೋಯು/2008ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮ 8(3)ರ ಪ್ರಕರಣದ ಮೇರೆಗೆ:

1978ರ ಕರ್ನಾಟಕ ನಾಗರೀಕ ಸೇವಾ ನಿಯಮಗಳ ಪರಿಶಿಷ್ಟ–1 (ಅಪೆಂಡಿಕ್ಸ್–1)ಕ್ಕೆ ತಿದ್ದುಪಡಿ ಮಾಡಿ ದಿನಾಂಕ 23.12.2008ರಂದು